## ಅಧ್ಯಾಯ-೬

# ಬ್ಯಾಂಕಿಂಗ್, ಸಹಕಾರ ಮತ್ತು ವಾಣಿಜ್ಯ

**ಪ್ರಾಚೀನ ಕಾಲದ ಹಣಕಾಸು ವ್ಯವಹಾರ ಪದ್ಧತಿ :** ತಾಲೂಕಿನಲ್ಲಿ ಹಿಂದಿನಿಂದಲೂ ಧರ್ಮದ ಬಡ್ಡಿ ನೀಡುವುದು, ಚೀಟಿ ವ್ಯವಹಾರ, ಬಡ್ಡಿ ಇಲ್ಲದೆ ಹಾಗೆಯೇ ಹಣ ನೀಡಿ ಹಿಂದಕ್ಕೆ ಪಡೆಯುವ ಕೈಸಾಲ ಪದ್ಧತಿ, ಕೆಲವು ವೇಳೆ ಪಡೆದ ಸಾಲದ ಮೊತ್ತಕ್ಕೆ ಭತ್ತ, ರಾಗಿ ಹಾಗೂ ಇತರ ದವಸ ಧಾನ್ಯಗಳನ್ನು ಬಡ್ಡಿ ರೂಪದಲ್ಲಿ ನೀಡುವ ಪದ್ಧತಿ ಜಾರಿಯಲ್ಲಿತ್ತು. ಹಣದ ಲೇವಾದೇವಿಯಲ್ಲಿ ಭೂಮಾಲೀಕರು ಹಾಗೂ ಹಣವಂತರು ಸಾಲ ನೀಡಿ ನ್ಯಾಯಯುತವಾಗಿ ಬಡ್ಡಿ ಸಹಿತ ಆ ಹಣವನ್ನು ಹಿಂದೆ ಪಡೆಯುವ ಕ್ರಮವಿತ್ತು. ನೀಡಿದ ಸಾಲಕ್ಕಾಗಿ ಜೀತದಾಳುಗಳನ್ನು ಒತ್ತೆಯಾಳಾಗಿ ಇಟ್ಟುಕೊಳ್ಳುವ ಜೀತಪದ್ಧತಿಯೂ ಚಾಲ್ತಿಯಲ್ಲಿತ್ತು. ಜೀತವಿಮೋಚನಾ ಕಾಯ್ದೆ (೧೯೭೬)ಯನ್ವಯ ತಾಲೂಕಿನಲ್ಲಿ ೨.೫೭೭ ಜೀತದಾಳುಗಳನ್ನು ೧೯೮೬ರ ವೇಳೆಗೆ ಗುರುತಿಸಲಾಗಿದ್ದು, ಹಂತಹಂತವಾಗಿ ಮುಕ್ತಗೊಳಿಸಿ ಪುನರ್ವಸತಿ ಈಗಾಗಲೇ ಕಲ್ಪಿಸಲಾಗಿದೆ.

ಆಧುನಿಕ ಸಮಾಜದಲ್ಲಿ ರೈತ ಸಹಕಾರಿ ಸಂಘ, ಸಹಕಾರಿ ಬ್ಯಾಂಕು ಹಾಗೂ ಭೂಅಭಿವೃದ್ಧಿ ಬ್ಯಾಂಕುಗಳು; ತಮಿಳರ ಕಾಸಿನ ಬಡ್ಡಿ; ಲೇವಾದೇವಿ, ಸೇಟುಗಳ ಬಡ್ಡಿ-ಲೇವಾದೇವಿ ವ್ಯವಹಾರಗಳು ತಲೆ ಎತ್ತಿದವು. ಮೂರನೆಯ ಹಂತದಲ್ಲಿ ತಾಲೂಕಿನಲ್ಲಿ ಪ್ರಾಥಮಿಕ ಭೂಅಭಿವೃದ್ಧಿ ಬ್ಯಾಂಕು, ತಕಾವಿ ಸಾಲ, ನೀರೆತ್ತುವ ಯಂತ್ರ, ಬಾವಿ, ಬೆಳೆ ಮುಂತಾದ ಅಭಿವೃದ್ಧಿಗಾಗಿ ಸಾಲ ನೀಡುವ ರೀತಿ ನೀತಿಗಳು ಪ್ರಾರಂಭವಾದವು. ಇದೇ ಅಲ್ಲದೆ ಕೆನರಾ ಬ್ಯಾಂಕ್, ಸ್ಟೇಟ್ ಬ್ಯಾಂಕು, ಸಿಂಡಿಕೇಟ್ ಬ್ಯಾಂಕು, ಕಾವೇರಿ ಗ್ರಾಮೀಣ ಬ್ಯಾಂಕು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು ಮುಂತಾದ ಬ್ಯಾಂಕುಗಳು ಹಣಕಾಸಿನ ವ್ಯವಹಾರ ಪ್ರಾರಂಭಿಸಿದವು.

**ರಾಷ್ಟ್ರೀಕೃತ ಬ್ಯಾಂಕಿಂಗ್ ಚಟುವಟಿಕೆಗಳು ಹಾಗೂ ಸಾಧನೆ :** ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಪ್ರಪ್ರಥಮ ಬಾರಿಗೆ 'ವೈದ್ಯೇಶ್ವರಸ್ವಾಮಿ ಕೋ-ಅಪರೇಟಿವ್ ಬ್ಯಾಂಕ್' ಸ್ಥಾಪನೆಯಾಯಿತು. ಹುಣಸೂರಿನಲ್ಲಿ ೧೯೫೭ರಲ್ಲಿ ಆರಂಭಗೊಂಡ ಜಾಯಿಂಟ್ ಸ್ಟಾಕ್ ಕಂಪನಿ 'ಹುಣಸೂರು ಬ್ಯಾಂಕ್' ಈ ತಾಲೂಕಿನಲ್ಲೂ ಕಾರ್ಯ ಪ್ರವೃತ್ತವಾಗಿತ್ತು. ಏತನ್ಮಧ್ಯೆ ರೈತರನ್ನು ದುಬಾರಿ

ಬಡ್ಡಿಯ ಹೊಡೆತದಿಂದ ರಕ್ಷಿಸಲೆಂದೇ ಸರ್ಕಾರವು ಕೃಷಿ ಬ್ಯಾಂಕ್‌ಗಳನ್ನು ೧೮೯೪ರಲ್ಲಿ ಆರಂಭಿಸಿತು. ಜಾಯಿಂಟ್ ಸ್ಟಾಕ್ ಕಂಪೆನಿ ನೀತಿನಿಯಮ, ಸಹಕಾರಿ ತತ್ವಗಳ ಆಧಾರದ ಮೂಲಕ, ನೋಂದಣಿಗೊಂಡು ಸದಸ್ಯರಾದ ಭೂ ಮಾಲೀಕರನ್ನೊಳಗೊಂಡ, ಚುನಾಯಿತ ಪ್ರತಿನಿಧಿಗಳ ನೇತೃತ್ವದಲ್ಲಿ ಕಾರ್ಯ ನಿರ್ವಹಿಸಲಾರಂಭಿಸಿತು. ಈ ತಾಲೂಕಿನಲ್ಲೂ ಅಂತಹ ಬ್ಯಾಂಕುಗಳು ಆರಂಭಗೊಂಡವಾದರೂ ೧೯೧೭ರ ವೇಳೆಗೆ ಈ ಬ್ಯಾಂಕುಗಳು ಮುಳುಗಿ ಹೋದವು.

ಅಲ್ಲಿಂದೀಚೆಗೆ ಬ್ಯಾಂಕಿಂಗ್ ಉದ್ಯಮ ಆಗ ಹುಣಸೂರು ತಾಲೂಕಿನಲ್ಲಿ ಅಂತರ್ಗತವಾಗಿದ್ದ ಈ ತಾಲೂಕು ಪ್ರದೇಶದಲ್ಲೂ ನಿರಂತರವಾಗಿ ನಡೆದುಕೊಂಡು ಬಂದಿವೆ. ೧೯೫೦ರ ನಂತರ ಮೈಸೂರು ಬ್ಯಾಂಕ್ ತನ್ನ ಮೊದಲ ಶಾಖೆಯನ್ನು ಪಿರಿಯಾಪಟ್ಟಣದಲ್ಲಿ ತೆರೆಯಿತು. ಪಿರಿಯಾಪಟ್ಟಣದಲ್ಲಿ ೧೯೭೬ರ ನಂತರ ಗ್ರಾಮೀಣ ಬ್ಯಾಂಕ್ ಶಾಖೆಗಳು ತಾಲೂಕಿನಲ್ಲಿ ಆರಂಭಗೊಂಡವು. ೧೯೮೬ರ ವೇಳೆಗೆ ತಾಲೂಕಿನಲ್ಲಿ ಏಳು ಶಾಖಾ ಬ್ಯಾಂಕ್‌ಗಳು ಕಾರ್ಯನಿರ್ವಹಿಸುತ್ತಿದ್ದವು. ೨೦೦೬ರ ವೇಳೆಗೆ ಒಂಭತ್ತು ವಾಣಿಜ್ಯ ಬ್ಯಾಂಕುಗಳು ಹಾಗೂ ಮೈಸೂರು ಬ್ಯಾಂಕಿನ ಮಾರ್ಗದರ್ಶನದಲ್ಲಿ ಏಳು ಗ್ರಾಮೀಣ ಬ್ಯಾಂಕುಗಳು ತಾಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಅವುಗಳಲ್ಲಿ ಒಟ್ಟು ೧೩,೬೪೨ ಲಕ್ಷ ರೂ.ಗಳ ಠೇವಣಿ ಸಂಗ್ರಹವಿದ್ದು, ೧೬,೧೮೬ ಲಕ್ಷ ರೂ.ಗಳ ಸಾಲವನ್ನು ವಿತರಿಸಲಾಗಿತ್ತು. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ಹತ್ತು ವಾಣಿಜ್ಯ ಶಾಖಾ ಬ್ಯಾಂಕುಗಳು ಹಾಗೂ ಸಹಕಾರಿ ಬ್ಯಾಂಕುಗಳೂ ಸೇರಿದಂತೆ ಏಳು ಗ್ರಾಮೀಣ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿದ್ದವು. ಅವುಗಳಲ್ಲಿ ೩೧,೭೧೧ ಲಕ್ಷ ರೂ. ಠೇವಣಿ ಸಂಗ್ರಹವಾಗಿದ್ದು, ೨೭,೧೦೧ ಲಕ್ಷ ರೂ.ಗಳನ್ನು ಸಾಲವಾಗಿ ನೀಡಲಾಗಿದ್ದು, ಠೇವಣಿ–ಸಾಲದ ಶೇ. ೮೫.೪೬ ಅನುಪಾತವು ಆಗಿತ್ತು.

**ಸರ್ಕಾರಿ ವಿಮೆ :** ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯು ರಾಜ್ಯ ಸರ್ಕಾರಿ ನೌಕರರಿಗೇ ಸೀಮಿತವಾಗಿದ್ದು, ಸರ್ಕಾರಿ ನೌಕರರ ಜೀವವಿಮೆ, ವಾಹನ ವಿಮೆಗಳನ್ನು ನಿರ್ವಹಿಸುತ್ತಿದ್ದು, ತಾಲೂಕಿನ ಮೂರನೆಯ ಹಾಗೂ ನಾಲ್ಕನೆಯ ದರ್ಜೆಯ ನೌಕರರ ವಿಮಾಖಾತೆಗಳನ್ನು ಜಿಲ್ಲಾ ವಿಮಾ ಕಚೇರಿಯು ೧೯೮೨ರ ವರೆಗೆ ನಿರ್ವಹಿಸಿದರೆ, ಪತ್ರಾಂಕಿತ ಅಧಿಕಾರಿಗಳ ಖಾತೆಯನ್ನು ವಿಭಾಗೀಯ ವಿಮಾ ಕಚೇರಿಯು ನಿರ್ವಹಿಸುತ್ತಿತ್ತು. ಇತ್ತೀಚೆಗೆ ವಿಭಾಗೀಯ ಕಚೇರಿಯ ರದ್ದತಿಯಿಂದಾಗಿ ಪತ್ರಾಂಕಿತ ಅಧಿಕಾರಿಗಳೂ ಸೇರಿದಂತೆ ಎಲ್ಲಾ ಸರ್ಕಾರಿ ನೌಕರರ ಖಾತೆಯನ್ನು ಜಿಲ್ಲಾ ವಿಮಾ ಕಚೇರಿಯೇ ನಿರ್ವಹಿಸುತ್ತದೆ.

ರಾಷ್ಟ್ರೀಯ ಉಳಿತಾಯ ಸಂಸ್ಥೆಯು (೧೯೫೭) ಆರಂಭವಾಗುವುದಕ್ಕೆ ಮೊದಲೇ ೧೮೭೦ರಷ್ಟು ಹಿಂದೆಯೇ ಉಳಿತಾಯ ಬ್ಯಾಂಕ್‌ಗಳು ತಾಲೂಕು ಮಟ್ಟದಲ್ಲಿ ಆರಂಭಗೊಂಡವು. ಮುಂದೆ ೧೮೮೨ರಲ್ಲಿ ಅಂಚೆಕಚೇರಿಗಳಲ್ಲಿ ಉಳಿತಾಯ ಖಾತೆಯನ್ನು ಗ್ರಾಹಕರಿಗಾಗಿ ಆರಂಭಿಸಲಾಯಿತು. ಆರಂಭದಲ್ಲಿ ಕನಿಷ್ಟ ನಾಲ್ಕಾಣೆಯಿಂದ ಗರಿಷ್ಟ

೫.೦೦ ರೂ.ಗಳನ್ನು ಠೇವಣಿಯಾಗಿ ಇಡಬಹುದಾಗಿದ್ದು, ವಾರ್ಷಿಕ ಬಡ್ಡಿ ಶೇ. ೩೩/೪ ಇದ್ದು, ೧೮೮೯ರಲ್ಲಿ ಗರಿಷ್ಟ ಮೊತ್ತವನ್ನು ಎರಡು ರೂ.ಗಳಿಗಿಳಿಸಲಾಯಿತು. ಪ್ರಸ್ತುತ ಅಂಚೆ ಇಲಾಖೆಯು ಉಳಿತಾಯ ಖಾತೆ, ಸಿ.ಟಿ.ಡಿ. ಆರ್.ಡಿ. ಎನ್.ಎಸ್.ಸಿ., ಇಂದಿರಾವಿಕಾಸ್, ಎನ್.ಎಸ್.ಎಸ್., ಎಂ.ಐ.ಎಸ್. ಮುಂತಾದ ಯೋಜನಾ ಸೌಲಭ್ಯಗಳನ್ನು ಗ್ರಾಹಕರಿಗೆ ನೀಡುತ್ತಿದೆ.

**ನಾಣ್ಯಪದ್ಧತಿ :** ತಾಲೂಕಿನಲ್ಲಿ ಲಭಿಸಿರುವ ವಿವಿಧ ರಾಜಮನೆತನಕ್ಕೆ ಸೇರಿದ ಶಾಸನಗಳಲ್ಲಿ ಗದ್ಯಾಣ, ವರಾಹ, ಹಾಗ, ಹಣ, ದ್ರಮ್ಮ, ಮುಂತಾದ ಚಿನ್ನ ಬೆಳ್ಳಿ ತಾಮ್ರದ ನಾಣ್ಯಗಳ ಉಲ್ಲೇಖವಿದೆ. ಆದರೆ ತಲಕಾಡಿನ ಗಂಗರ ಆಳ್ವಿಕೆಗೆ ಸೇರಿದ ಈ ಪ್ರದೇಶದಲ್ಲಿ ಅವರ ನಾಣ್ಯಗಳು ಲಭಿಸಿಲ್ಲ. ಹೊಯ್ಸಳ ವಿಷ್ಣುವರ್ಧನನ ಕಾಲಕ್ಕೆ ಸೇರಿದ ಚಿನ್ನದ ನಾಣ್ಯಗಳಲ್ಲಿ ತಲಕಾಡುಗೊಂಡ ಎಂಬ ಬಿರುದಿದ್ದ ಬಗ್ಗೆ ಮಾಹಿತಿ ಲಭ್ಯವಿದ್ದು, ಒಂದೆರಡು ನಾಣ್ಯಗಳೂ ಬೇರೆಡೆ ಲಭಿಸಿವೆ. ಹೈದರ್–ಟಿಪ್ಪು ಕಾಲದಲ್ಲಿ ವಿವಿಧ ಮೌಲ್ಯದ ಚಿನ್ನ–ಬೆಳ್ಳಿಯ ಅಹಮದಿ, ಹೈದರಿ, ಇಮಾನಿ, ಅಬೀದಿ ಬಾದೂರಿ ಪಣ ಎಂಬ ನಾಣ್ಯಗಳನ್ನು ಟಂಕಿಸಿ ಚಲಾವಣೆಗೆ ಬಿಡಲಾಗಿತ್ತು. ಅಲ್ಲದೇ ೧೭೮೨ರಲ್ಲಿ ೧/೪, ೧/೨ ಹಾಗೂ ಒಂದು ಆಣೆ(೧೨ ಕಾಸು)ಯ ನಾಣ್ಯಗಳನ್ನು ಬಳಕೆಗೆ ತರಲಾಯಿತು. ಮುಂದೆ ಸಂಸ್ಥಾನವು ಬ್ರಿಟಿಷ್ ಕಮೀಷನರುಗಳ ಆಡಳಿತಕ್ಕೊಳಪಟ್ಟ ನಂತರ ಭಾರತೀಯ ನಾಣ್ಯ ಕಾಯ್ದೆ (೧೮೭೦)ಯನ್ನು ಸಂಸ್ಥಾನಕ್ಕೂ ವಿಸ್ತರಿಸಲಾಯಿತು. ಇದರೊಂದಿಗೆ ಬ್ರಿಟಿಷ್ ನಾಣ್ಯಗಳು ಸಂಸ್ಥಾನದ ಅಧೀಕೃತ ನಾಣ್ಯಗಳಾದವು. ಸಂಸ್ಥಾನದ ಆಡಳಿತವು ೧೮೮೧ರಲ್ಲಿ ಮೈಸೂರು ಅರಸರಿಗೆ ಹಸ್ತಾಂತರಗೊಂಡ ಮೇಲೂ ಬ್ರಿಟಿಷ್ ನಾಣ್ಯಗಳು ಅಧಿಕೃತ ನಾಣ್ಯಗಳಾಗಿ ಮುಂದುವರಿದವು. ಮುಂದೆ ೧೯೧೮ರಲ್ಲಿ ನೋಟುಗಳ ಚಲಾವಣೆಯು ಆರಂಭವಾಯಿತು. ಅಲ್ಲದೇ ಬ್ರಿಟಿಷರು ಚಲಾವಣೆಗೆ ತಂದಿದ್ದ ಕಾಸು, ಮೂರು (೧/೪ ಆಣೆ), ಆರು (ಅರ್ಧ ಆಣೆ) ಕಾಸು ಮೌಲ್ಯದ ತಾಮ್ರದ ನಾಣ್ಯಗಳು, ಚವಿ (ಎರಡು) ಹಾಗೂ ಪಾವಲಿ (ನಾಲು) ಆಣೆಯ ನಿಕಲ್ ನಾಣ್ಯಗಳು ಹಾಗೂ (ಅರ್ಧ ಹಾಗೂ ಒಂದು ರೂಪಾಯಿಯ) ಬೆಳ್ಳಿಯ ರೂಪಾಯಿಗಳು ಚಲಾವಣೆಯಲ್ಲಿದ್ದವು. ಸ್ವಾತಂತ್ರ್ಯಾನಂತರ ಭಾರತ ಸರ್ಕಾರದ ಲಾಂಛನದೊಂದಿಗೆ ನಾಣ್ಯ ಹಾಗೂ ನೋಟುಗಳು ಚಲಾವಣೆಗೆ ಬಂದವು. ಆದರೂ ಹದಿನಾರು ಆಣೆಯ ರೂಪಾಯಿ ಹಾಗೂ ೧೨ ಕಾಸಿನ ಆಣೆಯು ಮುಂದುವರಿಯಿತು. ಮುಂದೆ ೧೯೫೭ರಲ್ಲಿ ನಾಣ್ಯಪದ್ಧತಿಯಲ್ಲಿ ದಶಮಾಂಶ ಪದ್ಧತಿಯನ್ನು ಅಳವಡಿಸಲಾಯಿತು. ಅಲ್ಲಿಂದೀಚೆಗೆ ಭಾರತೀಯ ನಾಣ್ಯಪದ್ಧತಿ ಸಾಕಷ್ಟು ಸುಧಾರಿಸಿದ್ದು, ಇಂದು ಪೈಸೆ, ಆಣೆಗಳು ಲೆಕ್ಕಕ್ಕಿದ್ದರೂ, ಅವುಗಳ ಚಲಾವಣೆ ಕಡಿಮೆಯಾಗುತ್ತಿದ್ದು, ರೂಪಾಯಿ ನಾಣ್ಯಗಳೇ ಕನಿಷ್ಟ ಮೌಲ್ಯದ ನಾಣ್ಯವೆಂಬ ಭಾವನೆ ಜನಸಾಮಾನ್ಯರಲ್ಲಿ ಮೂಡುವಂತಾಗಿದೆ. ಒಂದು, ಎರಡು, ಐದು, ಹತ್ತು, ೨೦, ೫೦, ೧೦೦, ೫೦೦, ೧೦೦೦ ರೂ. ಮೌಲ್ಯದ ನೋಟುಗಳ ಜೊತೆಗೆ ಒಂದು, ಎರಡು, ಐದು ಹಾಗೂ ಹತ್ತು ರೂ. ಮೌಲ್ಯದ ನಾಣ್ಯಗಳೂ ಬಳಕೆಯಲ್ಲಿವೆ.

**ಸಹಕಾರ ಸಂಘಗಳು :** ೧೯೧೫ರಲ್ಲಿ ಬೆಟ್ಟದಪುರದಲ್ಲಿ ಆರಂಭವಾದ ಮಲ್ಲಿಕಾರ್ಜುನಸ್ವಾಮಿ ದೊಡ್ಡ ಪ್ರಮಾಣದ ಸಹಕಾರ ಸಂಘವು ಜಿಲ್ಲೆಯ ಮೊಟ್ಟಮೊದಲ ದೊಡ್ಡ ಪ್ರಮಾಣದ ಸಹಕಾರ ಸಂಘವಾಗಿತ್ತು. ಮುಂದೆ, ೧೯೨೩ರಲ್ಲಿ ಹುಣಸೂರಿನಲ್ಲಿ ಪಂಚಮ ಸಹಕಾರ ಸಂಘ ಹಾಗೂ ಬೆಕ್ರೆಯಲ್ಲಿ ಬಸವೇಶ್ವರ ಸ್ವಾಮಿ ಸಹಕಾರ ಸಂಘವು ೧೯೨೪ರಲ್ಲಿ ಸ್ಥಾಪನೆಯಾದವು. ೧೯೪೦ರಲ್ಲಿ ಕಿತ್ತೂರು ಮತ್ತು ಹಾರನಹಳ್ಳಿ ಗ್ರಾಮಗಳಲ್ಲಿ ಸಹಕಾರ ಸಂಘಗಳು ಸ್ಥಾಪನೆಯಾದವು. ೧೯೩೪ರ ನಂತರ ತಾಲೂಕಿನಲ್ಲಿ ಪ್ರಾಥಮಿಕ ಕೃಷಿ ಅಭಿವೃದ್ಧಿ ಬ್ಯಾಂಕು ಆರಂಭವಾಯಿತು.

೧೯೪೯ರಲ್ಲಿ ತಾಲೂಕಿನಲ್ಲಿ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘವನ್ನು ಸ್ಥಾಪಿಸಿ, ಈ ಸಂಘದ ಮೂಲಕ ಆಹಾರ ಪದಾರ್ಥಗಳನ್ನು ಸಗಟಾಗಿ ಖರೀದಿಸಿ ಗ್ರಾಮೀಣ ಪ್ರದೇಶದಲ್ಲಿ ಸ್ಥಾಪನೆಯಾಗಿದ್ದ ಸೇವಾ ಸಹಕಾರ ಸಂಘಗಳ ಮೂಲಕ ಪಡಿತರ ಆಹಾರ ಪದಾರ್ಥಗಳನ್ನು ಮಾರಾಟ ಮಾಡಲು ಪ್ರಾರಂಭಿಸಿತು. ಪಿರಿಯಾಪಟ್ಟಣದಲ್ಲಿ ತಂಬಾಕು ಮಾರಾಟಗಾರರ ಸಂಘವು ೧೯೫೦ರಲ್ಲಿ ಆರಂಭವಾಯಿತು. ಮೈಸೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ೧೯೫೫ರಲ್ಲಿ ಆರಂಭಗೊಂಡಿತಾದರೂ ಅದರ ಶಾಖೆ ಈ ತಾಲೂಕಿನಲ್ಲಿ ಆರಂಭವಾದದ್ದು ೧೯೬೨ರ ನಂತರವೆ. ಪ್ರಸ್ತುತ ಇದನ್ನು ಮೈ.ಮ.ಚಾ.ಕೇ.ಸ. ಬ್ಯಾಂಕ್ ಎಂದು ಕರೆಯಲಾಗಿದೆ.

೧೯೬೦ರ ದಶಕದಲ್ಲಿ ಮೈಸೂರು ಸರ್ಕಾರವು ಗ್ರಾಮೀಣ ಜನರಿಗೆ ಮತ್ತು ಬಡ ಹಾಗೂ ಹಿಂದುಳಿದವರಿಗೆ ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡುವ ಹಿನ್ನೆಲೆಯಲ್ಲಿ ತಾಲೂಕಿನ ಹೋಬಳಿ ಕೇಂದ್ರಗಳೂ ಸೇರಿದಂತೆ ಇತರ ಕಡೆಗಳಲ್ಲಿ ಸೇವಾ ಸಹಕಾರ ಸಂಘಗಳನ್ನು ತೆರೆದು ಅವುಗಳಿಗೆ ಷೇರುಗಳ ರೂಪದಲ್ಲಿ ಆರ್ಥಿಕ ನೆರವು ನೀಡಲು ಮುಂದಾಯಿತು. ಕೃಷಿ ಉದ್ದೇಶಕ್ಕೆ ಸ್ಥಾಪನೆಯಾಗುವ ಸಂಘಗಳಿಗೆ ಕಟ್ಟಡವನ್ನು ಕಟ್ಟಲು ಆರ್ಥಿಕ ನೆರವನ್ನು ಒದಗಿಸಿ, ಸಹಕಾರಿ ಚಳವಳಿಯಲ್ಲಿ ಸರ್ಕಾರವು ಭಾಗಿಯಾಯಿತು.

೧೯೬೧ರಲ್ಲಿ ಪ್ರಥಮವಾಗಿ ಪಿರಿಯಾಪಟ್ಟಣ ಮತ್ತು ಕಮಲಾಪುರಗಳಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘವನ್ನು ಸ್ಥಾಪಿಸಲಾಯಿತು. ಆನಂತರ ಇತರೇ ಸಹಕಾರ ಸಂಘಗಳು ಪ್ರಾರಂಭವಾದವು. ೧೯೮೬ರ ವೇಳೆಗೆ ತಾಲೂಕಿನಲ್ಲಿ ಒಟ್ಟು ೧೦೩ ಸಹಕಾರ ಸಂಘಗಳು ನೋಂದಣಿಸಲ್ಪಟ್ಟಿದ್ದವು. ಅದರಲ್ಲಿ ೩೧ ಪ್ರಾಥಮಿಕ ಕೃಷಿ ಸಾಲ ಸಹಕಾರ ಸಂಘಗಳಿದ್ದವು.

೧೯೭೬ರಲ್ಲಿ ಸೇವಾ ಸಹಕಾರ ಸಂಘಗಳನ್ನು ಪುನರ್ ಸಂಘಟಿಸಿ ವ್ಯವಸಾಯ ಸೇವಾ ಸಹಕಾರ ಸಂಘಗಳನ್ನಾಗಿ ಪರಿವರ್ತಿಸಿ ಈ ಸಂಘಗಳನ್ನು ಆರ್ಥಿಕವಾಗಿ ಬಲಗೊಳಿಸಲು ವ್ಯವಸಾಯ ಸೇವಾ ಸಹಕಾರ ಬ್ಯಾಂಕಾಗಿ ೧೯೯೮ ರಲ್ಲಿ ಪರಿವರ್ತಿಸಲಾಯಿತು. ಈ ಬ್ಯಾಂಕ್ ವ್ಯಾಪ್ತಿಯು ಪಿರಿಯಾಪಟ್ಟಣ ತಾಲ್ಲೂಕಿನ ಎಲ್ಲಾ ಗ್ರಾಮಗಳನ್ನು ಒಳಗೊಂಡಿರುತ್ತದೆ.

ತಾಲೂಕಿನಲ್ಲಿ ೩೬,೫೦೦ ವ್ಯವಸಾಯ ಕುಟುಂಬಗಳಿದ್ದು ಈ ಪ್ರದೇಶದ ಮುಖ್ಯ ಬೆಳೆ ತಂಬಾಕು, ಮುಸುಕಿನ ಜೋಳ, ಭತ್ತ ಮತ್ತು ರಾಗಿಯಾಗಿರುತ್ತದೆ. ವಾರ್ಷಿಕ ೨೦೦ ಕೋಟಿ ರೂಗಳ ತಂಬಾಕು ಮತ್ತು ೪೦ ಕೋಟಿ ರೂಗಳ ಮುಸುಕಿನ ಜೋಳವನ್ನು ಬೆಳೆದು ಮಾರಾಟ ಮಾಡಲಾಗುತ್ತಿದೆ. ಇದರಿಂದ ರೈತರ ಆರ್ಥಿಕಾಭಿವೃದ್ಧಿಗೆ ಸಹಕಾರಿಯಾಗುತ್ತಿದೆ.

ಈ ತಾಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಂಘಗಳೆಂದರೆ, ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ–೧, ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕು–೧, ವ್ಯವಸಾಯ ಸೇವಾ ಸಹಕಾರ ಬ್ಯಾಂಕುಗಳು–೨೮, ಹಾಲು ಉತ್ಪಾದಕರ ಸಹಕಾರ ಸಂಘಗಳು–೪೬ ಪಿರಿಯಾಪಟ್ಟಣ ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಹಕಾರ ಸಂಘ–೧, ಪಿರಿಯಾಪಟ್ಟಣ ತಾಲ್ಲೂಕು ಕೇಶಾಲಂಕಾರಿಗಳ ಕಲ್ಯಾಣ ಮತ್ತು ವಿವಿಧೋದ್ದೇಶ ಸಹಕಾರ ಸಂಘ–೧, ಪಿರಿಯಾಪಟ್ಟಣ ತಾಲ್ಲೂಕು ಸರ್ಕಾರಿ ನೌಕರರ ಬಳಕೆದಾರರ ಸಹಕಾರ ಸಂಘ–೧, ಗೃಹ ನಿರ್ಮಾಣ ಸಹಕಾರ ಸಂಘ–೧, ನೀರಾವರಿ ಸಹಕಾರ ಸಂಘಗಳು–೨, ಮೀನುಗಾರರ ಸಹಕಾರ ಸಂಘಗಳು–೨, ಕೈಗಾರಿಕಾ ಸಹಕಾರ ಸಂಘಗಳು–೧, ಪಿರಿಯಾಪಟ್ಟಣ ಟೌನ್ ಗಾರೆಕೆಲಸ ಮತ್ತು ಕೂಲಿಗಾರರ ಸಹಕಾರ ಸಂಘ–೧ ಮತ್ತು ದೊಡ್ಡಕಮರವಳ್ಳಿ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘ–೧ ಇವೂ ಸೇರಿದಂತೆ, ಹೀಗೆ ಒಟ್ಟು ೮೭ ಸಂಘಗಳು ಕಾರ್ಯನಿರ್ವಹಿಸುತ್ತಿದ್ದವು.

ಈ ಸಂಘಗಳಲ್ಲಿನ ಒಟ್ಟು ಸದಸ್ಯರ ಸಂಖ್ಯೆ ೫೫,೬೫೦ ಇದ್ದು ಇದರಲ್ಲಿ ೬೫೩೦ ಪರಿಶಿಷ್ಟಜಾತಿ ಸದಸ್ಯರು, ೨೭೨೦ ಪರಿಶಿಷ್ಟ ಪಂಗಡದ ಸದಸ್ಯರು, ಹಾಗೂ ೮೫೦೦ ಮಹಿಳಾ ಸದಸ್ಯರಿರುತ್ತಾರೆ. ಈ ಸಂಘಗಳ ಒಟ್ಟು ದುಡಿಯುವ ಬಂಡವಾಳ ೨೫೫೦.೨೦ ಲಕ್ಷಗಳಾಗಿದ್ದು, ಪಾವತಿಯಾದ ಪಾಲು ಬಂಡವಾಳ ೨೮೫.೬೦ ಲಕ್ಷಗಳಾಗಿರುತ್ತದೆ. ಇದರಲ್ಲಿ ೪೬.೫೦ ಲಕ್ಷಗಳು ಸರ್ಕಾರದ್ದಾಗಿರುತ್ತದೆ. ಸಂಘಗಳಲ್ಲಿ ೪೨೫.೧೧ ಲಕ್ಷಗಳು ಸ್ವಂತ ನಿಧಿಗಳಿದ್ದು ೭೮.೨೨ ಲಕ್ಷಗಳು ಆಪದ್ಧನವಿದ್ದು, ೫೧೦.೨೦ ಲಕ್ಷ ಠೇವಣಾತಿಗಳನ್ನು ಸಂಗ್ರಹಿಸಿರುತ್ತದೆ. ೨೦೦೯ರ ಮಾರ್ಚ್ ಅಂತ್ಯಕ್ಕೆ ೨೮ ವ್ಯವಸಾಯ ಸಹಕಾರ ಸಂಘ, ೮೧ ಹಾಲು ಉತ್ಪಾದಕರ ಸಹಕಾರ ಸಂಘ ಹಾಗೂ ೨೧ ಇತರೆ ಸಹಕಾರಿ ಸಂಘಗಳಿದ್ದು (ಒಟ್ಟು ೧೨೫) ಅವುಗಳಲ್ಲಿ ಎಂಟು ಸ್ಥಗಿತಗೊಂಡಿದ್ದು ಎಂಟು ಸಮಾಪನಗೊಂಡಿದ್ದವು. ಇವುಗಳಲ್ಲಿ ಒಟ್ಟು ೬೨,೪೬೫ ಸದಸ್ಯರಿದ್ದರು.

ತಾಲ್ಲೂಕಿನಲ್ಲಿರುವ ಸಂಘ ಮತ್ತು ನ್ಯಾಯಬೆಲೆ ಅಂಗಡಿಗಳಿಗೆ ಪಡಿತರ ಆಹಾರ ಪದಾರ್ಥಗಳನ್ನು ಮಾರಾಟ ಮಾಡುತ್ತಿದೆ. ಈ ರೀತಿ ವಾರ್ಷಿಕ ಆರು ಕೋಟಿ ರೂಗಳ ವಹಿವಾಟು ನಡೆಸುತ್ತಿದೆ. ಪಿಕಾರ್ಡ್ ಬ್ಯಾಂಕು ರೈತರಿಗೆ ಕೊಳವೆಬಾವಿ, ತಂತಿಬೇಲಿ, ರೇಷ್ಮೆ, ತೆಂಗು, ಮಾವು, ಅಡಕೆ ಇತ್ಯಾದಿಗಳಿಗೆ ದೀರ್ಘಾವಧಿ ಸಾಲವನ್ನು ಒದಗಿಸುತ್ತಿದೆ. ೨೨೦ ಲಕ್ಷ ರೂ.ಗಳ ಸಾಲವನ್ನು ವಿತರಿಸುತ್ತಿದೆ. ೨೮ ವ್ಯವಸಾಯ

ಸೇವಾ ಸಹಕಾರ ಬ್ಯಾಂಕುಗಳು ಸದಸ್ಯರಿಗೆ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲವನ್ನು ವಿತರಣೆ ಮಾಡುತ್ತಿದ್ದು ರೈತ ಸದಸ್ಯರಿಗೆ ಅತ್ಯಂತ ಕಡಿಮೆ ಬಡ್ಡಿದರಲ್ಲಿ ಸಾಲವನ್ನು ಒದಗಿಸುತ್ತಿದ್ದು ಸಕಾಲಿಕವಾಗಿ ಬಿತ್ತನೆಬೀಜ, ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ ಔಷದಿಗಳನ್ನು ಸಹಾ ಒದಗಿಸುತ್ತಿದ್ದು, ನೇರವಾಗಿ ಸದಸ್ಯರ ಆರ್ಥಿಕಾಭಿವೃದ್ಧಿಗೆ ನೆರವಾಗುತ್ತಿರುತ್ತವೆ. ೧೯೯೯-೨೦೦೦ನೇ ಸಾಲಿನಲ್ಲಿ ೧೩.೫೦ ಕೋಟಿ ಅಲ್ಪಾವಧಿ ಸಾಲ, ೩.೫೦ ಕೋಟಿ ಮಧ್ಯಮಾವಧಿ ಸಾಲ, ೨೦೦೦-೨೦೦೧ ನೇ ಸಾಲಿನಲ್ಲಿ ೧೦.೫೦ ಕೋಟಿ ಅಲ್ಪಾವಧಿ ಸಾಲ ಮತ್ತು ೨.೫೦ ಕೋಟಿ ಮಧ್ಯಮಾವಧಿ ಸಾಲ ವಿತರಣೆ ಮಾಡಿ, ಶೇ. ೯೫ ರಷ್ಟು ವಸೂಲಾತಿ ಮಾಡಲಾಗುತ್ತಿದೆ. ವಸೂಲಾತಿಯು ಮೈಸೂರು ಜಿಲ್ಲೆಯಲ್ಲೇ ಈ ತಾಲ್ಲೂಕಿನಲ್ಲಿ ತೃಪ್ತಿದಾಯಕವಾಗಿರುತ್ತದೆ. ೨೦೦೯ರ ಮಾರ್ಚ್ ಅಂತ್ಯಕ್ಕೆ ಈ ಕೃಷಿ ಸಹಕಾರಿ ಸಂಘಗಳು ಒಟ್ಟು ೨,೭೮೬.೧೦ ಲಕ್ಷ ರೂ.ಗಳ ಅಲ್ಪಾವಧಿ ಸಾಲವನ್ನು ೩೪೬.೫೦ ಲಕ್ಷ ರೂ.ಗಳ ಮಧ್ಯಮಾವಧಿ ಸಾಲ ಹಾಗೂ ೫೬.೨ ಲಕ್ಷ ರೂ.ಗಳ ದೀರ್ಘಾವಧಿ ಸಾಲವನ್ನು ರೈತರಿಗೆ ನೀಡಿದ್ದವು.

ತಾಲೂಕಿನ ಪಿರಿಯಪಟ್ಟಣದಲ್ಲಿ ಕೃಷಿ ಉತ್ಪನ್ನ ಮುಖ್ಯ ಮಾರುಕಟ್ಟೆ ಹಾಗೂ ಉಪಮಾರುಕಟ್ಟೆಗಳಿದ್ದು, ೨೦೦೯ರ ಮಾರ್ಚ್ ಅಂತ್ಯಕ್ಕೆ ೨೯.೭೨ ಕೋಟಿ ರೂ.ಗಳ ವ್ಯವಹಾರ ಈ ಮಾರುಕಟ್ಟೆಗಳಲ್ಲಿ ನಡೆದಿತ್ತು.

**ಹಾಲು ಉತ್ಪಾದಕರ ಸಹಕಾರ ಸಂಘಗಳು :** ತಾಲೂಕಿನಲ್ಲಿರುವ ೮೧ ಹಾಲು ಉತ್ಪಾದಕರ ಸಂಘಗಳ ವತಿಯಿಂದ ದಿನವೊಂದಕ್ಕೆ ೬೦೦೦ ಲೀಟರಿಗೂ ಅಧಿಕ ಹಾಲು ಸಂಗ್ರಹಿಸಿ ಯೂನಿಯನ್‌ಗೆ ಕಳುಹಿಸುತ್ತಿದ್ದು, ಮಾಸಿಕ ೨೦ ಲಕ್ಷಕ್ಕೂ ಹೆಚ್ಚು ರೂಗಳನ್ನು ಹಾಲು ಉತ್ಪಾದಕರಿಗೆ ನೀಡುತ್ತಿದ್ದು ಈ ಮೂಲಕ ಅವರ ದೈನಂದಿನ ಜೀವನ ನಿರ್ವಹಣೆಗೆ ಸಕಾಲಿಕ ನೆರವನ್ನು ನೀಡುತ್ತಿದೆ. ಇತರೇ ಸಹಕಾರ ಸಂಘಗಳೂ ಸಹಾ ಆಯಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕಡುಬಡವರು, ನಿರ್ಗತಿಕರು, ಕೂಲಿಕಾರರು, ನಯನ ಕ್ಷತ್ರಿಯರು, ಕಸುಬುದಾರರು, ವ್ಯಾಪಾರಸ್ಥರುಗಳಿಂದ ಪಿಗ್ಮಿ ರೂಪದಲ್ಲಿ ದಿನವಹಿ ೨೫,೦೦೦ ಗಳಿಗೂ ಹೆಚ್ಚು ಸಂಗ್ರಹಿಸಿ ಅವರಲ್ಲಿ ಉಳಿತಾಯ ಮನೋಭಾವನೆಯನ್ನು ಪ್ರೇರೇಪಿಸಿ ಆರ್ಥಿಕವಾಗಿ ಮುಂದುವರೆಯಲು ನೆರವು ನೀಡುತ್ತಿವೆ.

**ಸ್ತ್ರೀಶಕ್ತಿ ಸಂಘಗಳು:** ನಗರ-ಗ್ರಾಮೀಣ ಪ್ರದೇಶಗಳಲ್ಲಿನ ಸ್ತ್ರೀಯರನ್ನು ಸಂಘಟಿಸುವ ಮೂಲಕ, ಅವರನ್ನು ಸ್ವಾವಲಂಭಿಗಳನ್ನಾಗಿಸುವುದರ ಜೊತೆಗೆ ಅವರ ಆರ್ಥಿಕಾಭಿವೃದ್ಧಿಗೂ ಅವಕಾಶ ಕಲ್ಪಿಸುವ ಉದ್ದೇಶದಿಂದ ನಾಡಿನಾದ್ಯಂತ ಸ್ಥಳೀಯವಾಗಿ ರೂಪಿತಗೊಂಡ ಸ್ತ್ರೀಶಕ್ತಿ ಸಂಘಗಳು ತಾಲೂಕಿನಲ್ಲೂ ಕಾರ್ಯನಿರ್ವಹಿಸುತ್ತಿವೆ. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನ ೬೬೫ ಸ್ತ್ರೀಶಕ್ತಿ ಕೇಂದ್ರಗಳಲ್ಲಿದ್ದ ಒಟ್ಟು ೧೧೭೪೬ ಮಹಿಳೆಯರಲ್ಲಿ ೨೧೩೭ ಜನ ಪರಿಶಿಷ್ಟ ಜಾತಿಗೂ, ೮೮೭ ಪರಿಶಿಷ್ಟ ಪಂಗಡಗಳಿಗೂ ಸೇರಿದ ಮಹಿಳೆಯರಿದ್ದರು. ತಾಲೂಕಿನ ಎಲ್ಲಾ ಸ್ತ್ರೀಶಕ್ತಿ ಕೇಂದ್ರಗಳು ಬ್ಯಾಂಕಿನಿಂದ ಸಾಲವನ್ನು ಪಡೆದಿದ್ದು, ಅವುಗಳಿಗೆ ಸರ್ಕಾರ ನೀಡಿರುವ ಆವರ್ತ ನಿಧಿಯು ೨.೯೦ಲಕ್ಷ ರೂ.ಗಳಾಗಿತ್ತು.

ಜಿಲ್ಲೆಯಲ್ಲಿ ಪಿರಿಯಾಪಟ್ಟಣ ತಾಲ್ಲೂಕಿನ ಸಹಕಾರಿ ಚಳುವಳಿ ಮತ್ತು ಸದಸ್ಯರುಗಳಲ್ಲಿ ಸಹಕಾರ ಮನೋಭಾವನೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು ಸದಸ್ಯರುಗಳ ಸಂಖ್ಯೆಯೂ ಸಹ ಬೆಳೆಯುತ್ತಿದೆ. ಸಹಕಾರ ಸಂಘಗಳು ರೈತ ಸದಸ್ಯರೊಡನೆ ನಿಕಟ ಮತ್ತು ನೇರ ಸಂಬಂಧ ಹೊಂದಿದ್ದು ಅವರ ಆರ್ಥಿಕಾಭಿವೃದ್ಧಿ, ಮತ್ತು ಸಾಮಾಜಿಕ ಮಟ್ಟವನ್ನು ಉತ್ತಮಪಡಿಸಿಕೊಳ್ಳಲು, ಸದಸ್ಯರಿಗೆ ನೆರವು ನೀಡುತ್ತಿವೆ. ಇದರಿಂದಾಗಿ ರೈತ ಸದಸ್ಯರು, ಶ್ರೀಮಂತರಿಂದ ಮತ್ತು ಲೇವಾದೇವಿಗಾರರಿಂದ ಹೆಚ್ಚಿನ ಬಡ್ಡಿ ದರದಲ್ಲಿ ಸಾಲ ಪಡೆಯುವುದು ಕ್ರಮೇಣ ಕಡಿಮೆಯಾಗುತ್ತಿದೆ.

**ಸಂತೆಗಳು :** ತಾಲೂಕು ಕೇಂದ್ರವಾದ ಪಿರಿಯಾಪಟ್ಟಣದಲ್ಲಿ ಶನಿವಾರದಂದು ಸಂತೆ ಕಟ್ಟುತ್ತದೆ. ಕಂಪಲಾಪುರದಲ್ಲಿ ಭಾನುವಾರ, ಪಂಚವಳ್ಳಿಯಲ್ಲಿ ಸೋಮವಾರ, ಅತ್ತಿಗೋಡಿನಲ್ಲಿ ಶುಕ್ರವಾರ, ಕಣಗಾಲಿನಲ್ಲಿ ಬುಧವಾರ ಹಾಗೂ ಬೆಟ್ಟದಪುರದಲ್ಲಿ ಭಾನುವಾರ ಸಂತೆ ಕಟ್ಟುತ್ತದೆ. ಆದರೆ ಪಿರಿಯಾಪಟ್ಟಣ ಮತ್ತು ಬೆಟ್ಟದಪುರಗಳಲ್ಲಿ ಮಾತ್ರವೇ ಸಂತೆ ವಹಿವಾಟು ಸಮಗ್ರವಾಗಿ ನಡೆಯುತ್ತದೆ. ಈ ಸಂತೆಗಳಲ್ಲಿ ಹಣ್ಣು ಹಂಪಲು, ಕಾಯಿ ಪಲ್ಲೆ, ದವಸ ಧಾನ್ಯ, ತೆಂಗಿನಕಾಯಿ, ಬೆಲ್ಲ, ಈರುಳ್ಳಿ–ಬೆಳ್ಳುಳ್ಳಿಗಳು– ಹೀಗೆ ರೈತರು ಬೆಳೆದ ಬೆಳೆಗಳಲ್ಲದೆ ಗ್ರಾಮೀಣರು ಬಯಸುವ ತಿಂಡಿ–ತೀರ್ಥ, ಕಡಲೆಪುರಿಗಳ ಮಳಿಗೆಗಳೂ ಇರುತ್ತವೆ. ಕಂಚುಮುಟ್ಟು ಪದಾರ್ಥ, ಬೀಸುವ ಕಲ್ಲು, ಕಾರ ಅರೆಯುವ ಕಲ್ಲು ಮುಂತಾದವು ಮಾರಾಟಕ್ಕಿರುತ್ತವೆ. ರೈತಾಪಿ ಜನಗಳಿಗೆ ಬೇಕಾದ ಹಗ್ಗ ಹುರಿ, ಕೊಡಲಿ, ಗುದ್ದಲಿ, ಪಿಕಾಸಿ ಮುಂತಾದ ಬೇಸಾಯ ಮುಟ್ಟುಗಳೂ ಮಾರಾಟವಾಗುತ್ತವೆ. ಇವುಗಳೇ ಅಲ್ಲದೆ ದನಕರು, ಕುರಿ, ಆಡು, ಕೋಳಿ, ಹಂದಿ, ಮೀನು (ಹಸಿಮೀನು ಹಾಗೂ ಉಪ್ಪು ಮೀನು) ಸೀಗಡಿ ಮುಂತಾದವೂ ಕೊಳ್ಳಲಿಕ್ಕೆ ಲಭ್ಯವಾಗುತ್ತವೆ. ತಾಲೂಕಿನ ಇತರೆಡೆಗಳಲ್ಲಿ ಸಂತೆ ನಡೆಯುತ್ತಿದ್ದುದ್ದಕ್ಕೆ ದಾಖಲೆಗಳಿವೆ. ತಾಲೂಕಿನಲ್ಲಿ ಪಿರಿಯಾಪಟ್ಟಣ(ಶನಿವಾರ), ಬೆಟ್ಟದಪುರ (ಭಾನುವಾರ), ಕಂಪಲಾಪುರ (ಭಾನುವಾರ)ಗಳಲ್ಲಿ ಪ್ರಮುಖ ಸಂತೆ ನಡೆಯುವ ಸ್ಥಳಗಳಾಗಿವೆ.

**ನಿಯಂತ್ರಿತ ಮಾರುಕಟ್ಟೆ :** ರೈತರಿಗೆ ಯೋಗ್ಯ ಹಾಗೂ ಸ್ಪರ್ಧಾತ್ಮಕ ಬೆಲೆಯನ್ನು ದೊರಕಿಸುವ ಸಲುವಾಗಿ ಸರ್ಕಾರವು ನಿಯಂತ್ರಿತ ಮಾರುಕಟ್ಟೆಗಳನ್ನು ೧೯೩೯ರ ಮೈಸೂರು ಕೃಷಿ ಉತ್ಪನ್ನ ಮಾರುಕಟ್ಟೆ ಕಾಯ್ದೆಯನ್ವಯ ೧೯೪೭ರಲ್ಲಿ ಆರಂಭಿಸಿತು. ಮುಂದೆ ಏಕೀಕರಣದ ನಂತರ ಹೆಚ್ಚು ಸಮಗ್ರವೂ ಏಕ ಪ್ರಕಾರವೂ ಆದ ಕೃಷಿ ಉತ್ಪನ್ನ ಮಾರಾಟ ನೀತಿಯನ್ನು ಒಳಗೊಂಡ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ಕಾಯ್ದೆಯನ್ನು (೧೯೬೬) ೧೯೬೮ರಲ್ಲಿ ಜಾರಿಗೊಳಿಸಿತು. ಅದರಂತೆ ಕೃಷಿ ಉತ್ಪನ್ನ ಉಪ ಮಾರುಕಟ್ಟೆಗಳು ತಾಲೂಕಿನ ಬೆಟ್ಟದಪುರದಲ್ಲಿ ೧೯೭೮ರಲ್ಲೂ ಹಾಗೂ ತಾಲೂಕು ಕೇಂದ್ರ, ಪಿರಿಯಾಪಟ್ಟಣದಲ್ಲಿ ೧೯೮೮ರಲ್ಲೂ ಆರಂಭಗೊಂಡವು. ಕ್ರಮೇಣ ಈ ಎರಡು ಉಪಮಾರುಕಟ್ಟೆಗಳಲ್ಲಿ ಪಿರಿಯಾಪಟ್ಟಣವನ್ನು ಮುಖ್ಯ ಮಾರುಕಟ್ಟೆಯು ದರ್ಜೆಗೇರಿಸಲಾಗಿದ್ದು, ಇನ್ನೊಂದು ಉಪಮಾರುಕಟ್ಟೆಯಾಗಿಯೇ ಮುಂದುವರಿದಿದೆ.

೨೦೦೮-೦೯ನೇ ಸಾಲಿನಲ್ಲಿ ಈ ಮಾರುಕಟ್ಟೆಗಳಲ್ಲಿ ಒಟ್ಟು ೨೯.೭೨ ಕೋಟಿ ರೂ.ಗಳ ವಹಿವಾಟು ನಡೆದಿತ್ತು.

**ಸಾರ್ವಜನಿಕ ಪಡಿತರ ವಿತರಣೆ :** ಈ ವ್ಯವಸ್ಥೆಯು ೧೯೪೪ರಷ್ಟು ಹಿಂದೆಯೇ ಸಂಸ್ಥಾನದಲ್ಲಿ ಅಸ್ತಿತ್ವಕ್ಕೆ ಬಂದರೂ, ೧೯೪೮ರಲ್ಲಿ ಅದನ್ನು ರದ್ದುಗೊಳಿಸಲಾಯಿತು. ಆದರೆ ಇದರ ಅಗತ್ಯ ೧೯೬೫ರಲ್ಲಿ ಉದ್ಭವಿಸಿದಾಗ ಆಯ್ದ ನಗರಗಳಲ್ಲಿ ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ಸರ್ಕಾರದಿಂದ ಮಾನ್ಯತೆ ಪಡೆದ ನ್ಯಾಯಬೆಲೆ ಅಂಗಡಿಗಳ ಮೂಲಕ ಆರಂಭಿಸಲಾಯಿತು. ಇದನ್ನು ೧೯೭೮ರ ವೇಳೆಗೆ ೪೦,೦೦೦ ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆಯಿರುವ ಪಟ್ಟಣಗಳಿಗೆ ವಿಸ್ತರಿಸಲಾಯಿತು. ಇದನ್ನು ಕ್ರಮೇಣ ಗ್ರಾಮೀಣ ಪ್ರದೇಶಗಳಿಗೂ ವಿಸ್ತರಿಸಲಾಯಿತು. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ೮೩ನ್ಯಾಯಬೆಲೆ ಅಂಗಡಿಗಳಿದ್ದು, (೪೬೫೬೧ ಬಿ.ಪಿ.ಎಲ್ + ೧೩.೬೪೪ ಎ.ಪಿ.ಎಲ್) ಪಡಿತರ ಚೀಟಿಗಳನ್ನು ಹೊಂದಿದ್ದ ಕುಟುಂಬಗಳು ಈ ಸೌಲಭ್ಯವನ್ನು ಪಡೆದಿದ್ದವು.

**ಉಗ್ರಾಣ ವ್ಯವಸ್ಥೆ :** ಸಾಂಪ್ರದಾಯಕವಾಗಿ ರೈತರು ಬೆಳೆದ ಹೆಚ್ಚುವರಿ ಬೆಳೆಯನ್ನು 'ಕಣಜ' 'ಹಗೇವು' ಮುಂತಾದೆಡೆಗಳಲ್ಲಿ ಶೇಖರಿಸಿಡುತ್ತಾರೆ. ಆದರೆ ಇವು ಹಾಳಾಗುವ ಸಾಧ್ಯತೆಯಿರುವುದರಿಂದ ರೈತರ ಅನುಕೂಲಕ್ಕಾಗಿ ಉಗ್ರಾಣಗಳ ನಿರ್ಮಾಣಕ್ಕೆ ಸರ್ಕಾರ ೧೯೬೨ರಲ್ಲಿ ಮುಂದಾಯಿತು. ಅದರಂತೆ ರಾಜ್ಯ ಉಗ್ರಾಣ ನಿಗಮವು ಉಗ್ರಾಣ ಕೋಠಿಗಳನ್ನು ತಾಲೂಕುಗಳನ್ನು ಸ್ಥಾಪಿಸುವ ಮೂಲಕ ದಾಸ್ತಾನುದಾರರಿಗೆ ಸಂಗ್ರಹಣೆ ಸೌಲಭ್ಯವನ್ನು ಒದಗಿಸುವುದರ ಜೊತೆಗೆ ದಾಸ್ತಾನುಗಳಿಗೆ ಧೂಮೋಪಚಾರ, ಔಷಧ ಸಿಂಪಡಣೆ ಸೌಲಭ್ಯವನ್ನೂ ನೀಡುತ್ತಿದ್ದು, ರೈತರು, ದಾಸ್ತಾನುದಾರರು, ಉಗ್ರಾಣ ರಸೀತಿಯ ಆಧಾರದ ಮೇಲೆ ಬ್ಯಾಂಕುಗಳಿಂದ ಬೆಳೆ ಸಾಲವನ್ನು ಪಡೆಯಬಹುದಾಗಿದೆ. ಪಿರಿಯಾಪಟ್ಟಣ ತಾಲೂಕಿನಲ್ಲೂ ಉಗ್ರಾಣವನ್ನು ಆರಂಭಿಸಲಾಗಿದೆ.

**ತೂಕ ಮತ್ತು ಅಳತೆ :** ನಾಣ್ಯ ಪದ್ಧತಿಯಂತೆ ತೂಕ ಮತ್ತು ಅಳತೆಯಲ್ಲೂ ಪ್ರಾದೇಶಿಕ ವ್ಯತ್ಯಾಸವಿತ್ತು. ತಾಲೂಕಿನ ಪ್ರಾಚೀನ ಶಾಸನಗಳಲ್ಲಿ ಸಲಗೆ, ಖಂಡುಗ, ಕೊಳಗಗಳನ್ನು ದವಸ ಧಾನ್ಯಗಳನ್ನು ಅಳೆಯಲೂ; ವೀಸೆ, ಸೇರು, ಹಾಗೂ ಸೊಲಿಗೆಯನ್ನು ದ್ರವ್ಯವಸ್ತುಗಳನ್ನು ಅಳೆಯಲು ಬಳಸುತ್ತಿದ್ದುದರ ಬಗ್ಗೆ ಹಲವಾರು ಉಲ್ಲೇಖ ಲಭಿಸುತ್ತದೆ. ಭೂಮಿಯನ್ನು ಅಳೆಯಲು ಗೇಣು, ಪಾದಳತೆಗಳು ರೂಢಿಯಲ್ಲಿದ್ದು, ಮನೆ, ಹಿತ್ತಿಲು, ಹಾಗೂ ನಿವೇಶನಗಳನ್ನು ಅಳೆಯಲು ಹಸ್ತ, ಮೊಳ, ಮಾರುಗಳು ಬಳಕೆಯಲ್ಲಿದ್ದು, ಇವು ವ್ಯಕ್ತಿಯಿಂದ ವ್ಯಕ್ತಿಗೆ ವ್ಯತ್ಯಾಸವಿರುತ್ತಿತ್ತು.

**ಇತರ ಸಮಾಜ ಸೇವಾ ಸೌಲಭ್ಯಗಳು**

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಮಹಿಳೆಯರು ಮತ್ತು ಅಂಗವಿಕಲರಿಗೆಂದು ಕೆಲವು ಯೋಜನೆಗಳನ್ನು ಹಾಕಿಕೊಂಡಿದೆ. ಮಹಿಳೆಯರು ಆರ್ಥಿಕವಾಗಿ ಸಬಲರಾಗಲು ಸಹಾಯವಾಗುವಂತೆ ೨೦೦೯ರ ಮಾರ್ಚ್ ಅಂತ್ಯಕ್ಕೆ

೬೬೫ ಸ್ತ್ರೀ–ಶಕ್ತಿ ಸಂಘಗಳನ್ನು ತಾಲೂಕಿನಲ್ಲಿ ರಚಿಸಿದ್ದು ಗ್ರಾಮೀಣ ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗಾಗಿ ಸೂಕ್ತ ಮಾರ್ಗದರ್ಶನ ನೀಡಲಾಗುತ್ತಿದೆ. ಈ ಗುಂಪುಗಳು ಹಣಕಾಸು ಹಾಗೂ ಲೆಕ್ಕಪತ್ರಗಳ ನಿರ್ವಹಣೆ, ವೈಯುಕ್ತಿಕ ಉಳಿತಾಯ, ಸಾಲತೀರುವಳಿ ಇತ್ಯಾದಿ ವಿಷಯಗಳಲ್ಲಿ ಪರಿಣತರಾಗಿ, ಪರಾವಲಂಬಿಗಳಾಗದೇ ಸ್ವಾವಲಂಬಿಗಳಾಗುತ್ತಿದ್ದಾರೆ. ಇದು ನಿಜಕ್ಕೂ ಹೆಮ್ಮೆಯ ವಿಷಯ. ಅಂಗವಿಕಲರ ಕಲ್ಯಾಣಕ್ಕಾಗಿ ಈ ಇಲಾಖೆಯು ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಬಡತನದ ರೇಖೆಯ ಕೆಳಗಿರುವ ಬಡಮಹಿಳೆಯರಿಗೆ B.P.L. ಗುರ್ತಿನ ಚೀಟಿ ವಿತರಣೆಯ ಜೊತೆಗೆ ಬಡಮಹಿಳೆಯರಿಗೆ ಸಾಲಕೊಡಿಸುವ 'ಉದ್ಯೋಗಿನಿ' ಯೋಜನೆಯನ್ನು ಜಾರಿಗೊಳಿಸಿದೆ. ಮತ್ತೆ 'ಆಧಾರ' ಎಂಬ ಯೋಜನೆಯಡಿ ಸ್ವಯಂ ಉದ್ಯೋಗ ಮಾಡಲು ಆರ್ಥಿಕ ನೆರವು ನೀಡುತ್ತಿದೆ. ಅಲ್ಲದೆ ಬುದ್ಧಿಮಾಂದ್ಯ ಮಕ್ಕಳ ಪೋಷಕರಿಗೆ ವಿಮಾ ಯೋಜನೆಯೊಂದನ್ನು ರೂಪಿಸಲಾಗಿದ್ದು, ಬಡ ವಿದ್ಯಾರ್ಥಿನಿಯರಿಗೆ ರಿಯಾಯ್ತಿ ಬಸ್‌ಪಾಸ್ ಕೊಡಿಸುವ ಸ್ತುತ್ಯಾರ್ಹ ಕೆಲಸ ಸಹ ನಡೆದಿದೆ. ಅಲ್ಲದೆ ಖಾಸಗಿ ಸಂಸ್ಥೆಯ ಮೂಲಕ 'ಸಾಂತ್ವನ ಮಹಿಳಾ ಸಹಾಯವಾಣಿ'ಯಿಂದ ಮಹಿಳೆಯರ ಸಮಸ್ಯೆಗಳಿಗೆ ಕೌಟುಂಬಿಕ ಸಲಹೆ ನೀಡುವ ಕಾರ್ಯವೂ ನಡೆದಿದೆ.

**ಸಂಘ ಸಂಸ್ಥೆಗಳು:** 'ಮಾನವ, ಸಂಘ ಜೀವಿ' ಎಂದು ಗ್ರೀಕ್ ತತ್ವಜ್ಞಾನಿ ಅರಿಸ್ಟಾಟಲ್ ಒಂದು ಕಡೆ ಹೇಳಿರುವುದುಂಟು. ಮಾನವ, ಮಾನವರ ಜೊತೆಯಲ್ಲಿ ಬದುಕಿ ಸಂಘ ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಆ ಮೂಲಕ ತನ್ನ ಹಲವಾರು ಬೇಡಿಕೆಗಳನ್ನು ಈಡೇರಿಸಿಕೊಳ್ಳುತ್ತಾನೆ. ಇಂದಿನ ಕಾಲದಲ್ಲಿ ಪರಸ್ಪರಾವಲಂಬನೆಯು ಹಿಂದೆಂದಿಗಿಂತಲೂ ಅನಿವಾರ್ಯವಾಗಿದೆ. ಹಾಗಾಗಿ ಮಾನವ ತನ್ನ ಅಗತ್ಯತೆಗೆ ಅನುಗುಣವಾಗಿ, ಆಸಕ್ತಿ ಮತ್ತು ಅಭಿರುಚಿಗೆ ತಕ್ಕಂತೆ ಬೇರೆ ಬೇರೆ ಬಗೆಯ ಸಂಘ ಸಂಸ್ಥೆಗಳನ್ನು ಸ್ಥಾಪಿಸಿ ಆ ಮೂಲಕ ತನ್ನ ಅಗತ್ಯತೆಗಳನ್ನು ಪೂರೈಸಿಕೊಳ್ಳುತ್ತಿದ್ದಾನೆ. ಈ ದಿಸೆಯಲ್ಲಿ ಪಿರಿಯಾಪಟ್ಟಣ ತಾಲ್ಲೂಕಿನಲ್ಲೂ ಅನೇಕ ಬಗೆಯ ಸಂಘ ಸಂಸ್ಥೆಗಳು ಸ್ಥಾಪನೆಗೊಂಡಿದ್ದು ಕಲೆ, ಸಾಹಿತ್ಯ, ಕ್ರೀಡೆ, ನೃತ್ಯ, ಸಹಕಾರ, ಧಾರ್ಮಿಕ ಮತ್ತು ಸಾಮಾಜಿಕ ಸೇವೆ, ಜನಜಾಗೃತಿ ಮತ್ತು ಸಂಘಟನೆ ಮುಂತಾದ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಸೇವೆಯನ್ನು ನೀಡುವುದರ ಮೂಲಕ ತಾಲ್ಲೂಕಿನ ಜನರ ಜೀವನಾಡಿಗಳಾಗಿವೆ.

* * * *